ಶ್ರೀ ವಿಜಯಕುಮಾರ್ ಶೆಟ್ಟಿ : ಈಗ ಈ ಪ್ರೊಪೋರ್ಷನೇಟ್ ಮಾಡಿರುವುದು ಬಹಳ ಕಡಿಮೆ ಇದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಳ್ಳೆಯ ಟ್ಯಾಕ್ಸ್ ಕಲೆಕ್ಷನ್ ಆಗುತ್ತಿದೆ. ಎಲ್ಲ ಒಳ್ಳೆಯದನ್ನು ನಮಗೆ ಹೇಳುತ್ತಾರೆ. ಆದರೆ ನಮಗೆ ಕೊಡಬೇಕಾದ ಪಾಲು ಏನು ಇದೆ, ಆ ಪಾಲನ್ನು ನಮ್ಮ ಕರ್ತವ್ಯದ ಪ್ರಕಾರ ನಮಗೇನು ಸಿಕ್ಕಬೇಕೋ ಅದನ್ನು ಕೊಡುತ್ತಿಲ್ಲ. ಆದ್ದರಿಂದ ಸ್ವಲ್ಪ ಕಡಿಮೆ ಎಂದರೂ ನಮಗೆ ರೋಡ್ ಮೈಂಟಿನೆನ್ಸ್‌ಗೆ, ಇತರೆ ಕೆಲವು ಕಾಮಗಾರಿಗಳಿಗೋಸ್ಕರ ಸಿಗುವಂತಹ ಹಣದ ಹೆಚ್ಚಿನ ಮೊಬಲಗನ್ನು ನಮಗೆ ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಹಣಕಾಸು ಆಯೋಗ ತೀರ್ಮಾನ ಮಾಡಿದ್ದು ಏನು? ಅದು ಯಾವ ರೀತಿಯ ಪ್ರೊಪೋಷನ್ ಎಂಬುದನ್ನು ದಯಮಾಡಿ ಹೇಳಿ. ಪ್ರೊಪೋರ್ಷನೇಟ್ ಎಷ್ಟು ಇದೆ? ಇನ್ ಕಂನಲ್ಲಿ ಎಷ್ಟು ಪ್ರೊಪೋರ್ಷನೇಟ್ ಆಗಿ ಜಿಲ್ಲೆಗೆ ಕೊಡಬೇಕು? ಆ ಪ್ರಕಾರ ನಮಗೆ ಸಿಗುವಂತಹದು ಏನೂ ಸಾಕಾಗುವುದಿಲ್ಲ. ರಸ್ತೆಗಳೆಲ್ಲಾ ಬಹಳಷ್ಟು ಹಾಳಾಗಿದೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದನ್ನು ಹೆಚ್ಚು ಮಾಡಬೇಕು ಮತ್ತು ಪ್ರೊಪೋರ್ಷನೇಟ್ ಯಾವುದೆಂದು ತಿಳಿಸಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಗಮನದಲ್ಲಿಡುತ್ತೇವೆ.

**ಸರ್ಕಾರಿ ಕೆಲಸದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಒಟ್ಟು ಸಂಖ್ಯೆ**

57 (564) ಶ್ರೀ ರೇವುನಾಯಕ್ (ಬೆಳವಂಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕೆಲಸದಲ್ಲಿ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಒಟ್ಟು ಸಂಖ್ಯೆ ಎಷ್ಟು (ಇಲಾಖಾವಾರು : ಹುದ್ದೆವಾರು ಮಾಹಿತಿ ಒದಗಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಲಭ್ಯವಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

## ಅನುಬಂಧ

**ರಾಜ್ಯ ಸರ್ಕಾರಿ ಸೇವೆಯಲ್ಲಿ ದಿನಾಂಕ 31-31997ರಲ್ಲಿದ್ದಂತೆ ಮಂಜೂರಾದ, ಭರ್ತಿಮಾಡಲ್ಪಟ್ಟ ಹುದ್ದೆಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಗುಂಪುವಾರು ವಿಂಗಡಣೆ :**

| ಕ್ರಮ ಸಂಖ್ಯೆ | ಗುಂಪು | ಮಂಜೂರಾದ ಹುದ್ದೆಗಳು (ಸಂಖ್ಯೆಗಳಲ್ಲಿ) | ಭರ್ತಿಮಾಡಲ್ಪಟ್ಟ ಹುದ್ದೆಗಳಲ್ಲಿ | | |
|---|---|---|---|---|---|
| | | | ಒಟ್ಟು | ಪರಿಶಿಷ್ಟಜಾತಿ | ಪರಿಶಿಷ್ಟ ಪಂಗಡ |
| 1 | 2 | 3 | 4 | 5 | 6 |
| 1 | ಎ | 17,053 | 13,689 | 1,826 | 358 |
| 2 | ಬಿ | 28,386 | 22,313 | 2,607 | 672 |
| 3 | ಸಿ | 4,29,585 | 3,64,162 | 51,548 | 11,519 |
| 4 | ಡಿ | 89,339 | 70,120 | 15,277 | 3,506 |
| | ಒಟ್ಟು | 5,64,363 | 4,70,284 | 71,258 | 16,055 |

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಭರ್ತಿ ಮಾಡಲ್ಪಟ್ಟ ಹುದ್ದೆಗಳು ಒಟ್ಟು 13,689; ಅದರಲ್ಲಿ 1,826 ಪರಿಶಿಷ್ಟ ಜಾತಿ ಹಾಗೂ 358 ಪರಿಶಿಷ್ಟ ಪಂಗಡಕ್ಕೆ ಕೊಟ್ಟಿದ್ದಾರೆ. ಆದರೆ ಇಲ್ಲಿ ನೋಡಿದಾಗ ಗೊತ್ತಾಗುತ್ತಿದೆ. 'ಬಿ' ಗುಂಪಿನಲ್ಲಿ ನೋಡಿದಾಗ 12 ಪರ್ಸೆಂಟ್ ಕೊಟ್ಟಿದ್ದಾರೆ. ಸಿ ಗ್ರೂಪ್‌ನಲ್ಲಿ 15 ಪರ್ಸೆಂಟ್ ಕೊಟ್ಟಿದ್ದಾರೆ. ಸಾಕಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿಗದಿವಾದಂತಹ ರಿಸರ್ವೇಷನ್ ಪರ್ಸೆಂಟೇಜ್ ನೋಡಿದಾಗ ಗ್ರೂಪ್ 'ಎ' ಪೋಸ್ಟ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ 13.34 ಪರ್ಸೆಂಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ 2.62 ಪರ್ಸೆಂಟ್ ಇಷ್ಟು ಸಿಕ್ಕಿದೆ. ಅಂದರೆ ಸರಾಸರಿ ಎಷ್ಟು ಪಾರ್ಟಿಫಾಲ್ ಎಂದು ಹೇಳಿದರೆ 'ಎ' ಪೋಸ್ಟ್‌ನಲ್ಲಿ ಎಸ್‌ಸಿಯವರಿಗೆ 1.66 ಪರ್ಸೆಂಟ್, ಮತ್ತು ಷೆಡ್ಯೂಲ್ ಟ್ರೈಬ್‌ನವರಿಗೆ 0.38ಪರ್ಸೆಂಟ್ ಪಾರ್ಟಿಫಾಲ್ ಇದೆ ಈ ಗುಂಪಿನಲ್ಲಿ, ಹಾಗೆಯೇ 'ಬಿ' ಗುಂಪಿನಲ್ಲಿ ಷೆಡ್ಯಲ್ಡ್ ಕ್ಯಾಸ್ಟ್‌ನವರಿಗೆ 3.32 ಪರ್ಸೆಂಟ್ ಪಾರ್ಟಿಫಾಲ್ ಇದೆ. ಎಸ್‌ಟಿಅವರಿಗೆ ಪಾರ್ಟ್‌ಫಾಲ್ 3.16 ಪರ್ಸೆಂಟ್ ಇದೆ. ಒಟ್ಟು ಎ. ಬಂ. ಸಿ ಡಿ ಈ ನಾಲ್ಕು ಗುಂಪುಗಳಲ್ಲೂ

ಕೂಡ ಒಟ್ಟು ಪ್ರಮಾಣವನ್ನು ನೋಡಿದಾಗ 15. 15 ಪರ್ಸೆಂಟ್ ಎಸ್‌ಸಿ ಅವರಿಗೆ 3.41 ಪರ್ಸೆಂಟ್ ಎಸ್‌ಟಿ ಅವರಿಗೆ ಕೊಟ್ಟಿದೆ. ಇದರಲ್ಲಿ 'ಎ' ಮತ್ತು 'ಬಿ' ಗುಂಪಿನಲ್ಲಿ ನಾವು ಯಾವ ಪ್ರಮಾಣದಲ್ಲಿ ರೆಕ್ರೂಟ್‌ಮೆಂಟ್ ಮಾಡಬೇಕಾಗಿತ್ತೋ ಆ ಪ್ರಮಾಣದಲ್ಲಿ ಅದು ಆಗಿಲ್ಲ ಎನ್ನತಕ್ಕದ್ದು ಸ್ವಯಂ ವೇದ್ಯವಾಗಿರತಕ್ಕಂತಹ ವಿಚಾರ. ನಾನು ಹೇಳಿರತಕ್ಕಂತಹ ಪರ್ಸೆಂಟೇಜ್ ಆಧಾರದಲ್ಲಿ ಅದಕ್ಕೋಸ್ಕರ ನಾವು 'ಎ' ಗ್ರೂಪ್‌ನಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವುದರ ಮೂಲಕ ಒಂದಷ್ಟು ಪರ್ಸೆಂಟೇಜನ್ನು ಹೆಚ್ಚಿಸಲಿಕ್ಕೆ ರಾಜ್ಯ ಸರ್ಕಾರ ಉದ್ಯುಕ್ತವಾಗಿದೆ. ಹಾಗೆಯೇ ವಿಶೇಷ ನೇಮಕಾತಿ 1995ರರೂಲ್ಸ್ ಪ್ರಕಾರ, ಅದನ್ನೂ ಗಮನದಲ್ಲಿಟ್ಟುಕೊಂಡು ಮುಂದುವರೆದರೆ ನಾವು ಈ ಕೊರತೆ ಯನ್ನು ತುಂಬಿಸಬಹುದು ಎಂಬ ವಿಶ್ವಾಸ ಸರ್ಕಾರಕ್ಕೆ ಇದೆ.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ? ಮತ್ತು ಸಾಕಷ್ಟು ಜೆ.ಇ ಗಳು ಎ.ಇಇ ಪ್ರಮೋರ್ಷ ಸಲುವಾಗಿ ಒದ್ದಾಡು ತ್ತಿದ್ದಾರೆ. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಷೆಡ್ಯೂಲ್ ಟ್ರೈಬ್ ಸಹ ಇದ್ದಾರೆ. ಅದನ್ನು ಕೂಡ ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾದ ಡೇಟನ್ನು ಅಂಕಿ ಸಂಖ್ಯೆಯ ಮೂಲಕ ಹೇಳಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಈ 'ಎ' ಗ್ರೂಪ್‌ಗೆ ರಿಕ್ರೂಟ್‌ಮೆಂಟ್ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಸುಮಾರು 70-80 ಪೋಸ್ಟ್‌ಗಳಿಗೆ ನಾವು ರಿಕ್ರೂಟ್‌ಮೆಂಟ್ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇನೆ. ಆ ರಿಕ್ರೂಟ್‌ಮೆಂಟ್ ಆದಾಗ ನಾವು ಕಡ್ಡಾಯವಾಗಿ ಒದಗಿಸಬೇಕಾಗಿರತಕ್ಕದ್ದು 15 ಪರ್ಸೆಂಟ್ ಮತ್ತು 3 ಪರ್ಸೆಂಟ್. ಅದನ್ನು ಗಮನದಲ್ಲಿಟ್ಟುಕೊಂಡು ಆ ಹುದ್ದೆಗಳನ್ನು ತುಂಬುತ್ತೇವೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಈಗ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಎಸ್‌ಸಿ-ಎಸ್‌ಟಿ ಅವರಿಗೆ 'ಎ' ಗ್ರೂಪ್‌ನಲ್ಲಿ ಇನ್ನೂ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಅದನ್ನು ಹೊಸ ರಿಕ್ರೂಟ್‌ಮೆಂಟ್‌ನಲ್ಲಿ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದಾರೆ. ಅದು ತುಂಬಾ ಸಂತೋಷದ ವಿಚಾರ ಆದರೆ ಬ್ಯಾಕ್‌ಲಾಗ್ ಹುದ್ದೆಗಳು ಪ್ರಮೋಷನ್‌ನಿಂದಲೂ ಕೂಡ ಕ್ರಿಯೇಟ್ ಆಗಿವೆ. ಈಗ ಅವರಿಗೆ ಪ್ರಮೋಷನ್ ಕೊಡಬೇಕಾಗಿದೆ. ಅನೇಕ ಹುದ್ದೆಗಳ ಪ್ರಮೋಷನ್ ಪಟ್ಟಿಯಲ್ಲಿ ಎಸ್‌ಸಿ-ಎಸ್‌ಟಿ ಅಭ್ಯರ್ಥಿಗಳು ಇದ್ದಾರೆ. ಆ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಪ್ರಮೋಷನ್ ಅನ್ನು ತಕ್ಷಣದಲ್ಲಿ ಕೊಡಬೇಕು. ಅದು ಸೀನಿಯಾರಿಟಿ ಪ್ರಕಾರ ಆಗಬೇಕು. ಅದು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಇದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಅದಷ್ಟು ಜಾಗ್ರತೆ ಅವರಿಗೆ ಪ್ರಮೋಷನ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಮಾ.ಯ ಅಧ್ಯಕ್ಷರೇ, ನಾವು ಮುಂದುನ ಐದು ವರ್ಷಗಳಿಗೆ ಈಗಾಗಲೇ ಈ ನೇಮಕಾತಿ ಪಾಲಿಸಿಯನ್ನು ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರಿ ಆದೇಶವೊಂದನ್ನು ದಿನಾಂಕ 16. 11. 1999ರಲ್ಲಿ ಹೊರಡಿಸಿದ್ದೇವೆ. ಇದರ ಪ್ರಕಾರ ಸುಮಾರು 532 ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳನ್ನು ತುಂಬಲು ನಾವು ಯೋಜನೆ ಹಾಕಿಕೊಂಡಿದ್ದೇವೆ. ಈ 532 ಹುದ್ದೆಗಳಲ್ಲಿ 80 ಎಸ್.ಸಿ ಮತ್ತು ಎಸ್.ಟಿ ಜನಾಂಗಗಳ ಅಭ್ಯರ್ಥಿಗಳಿಗೆ ಆದ್ಯತೆ ದೊರೆಯುತ್ತದೆ. ಇನ್ನು ಬ್ಯಾಕ್‌ಲಾಗ್ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.